

ಅಶ್ವಿನಿ, ದಿನೇಶ್‌ನನ್ನು ದೂಕಿದ. ಎಂತಾಯ್ತೆಂದು ನಾವು ಗಾಬರಿಯಿಂದ ತಿರುಗಿ ನೋಡಿದರೆ ಆತ ನೆಲದ ಮೇಲಿದ್ದ ಸಣ್ಣ ಹಾವೊಂದನ್ನು ತುಳಿಯುವವನಿದ್ದ. ಕೊನೆ ಗಳಿಗೆಯಲ್ಲಿ ಅದನ್ನು ನೋಡಿ ಅಶ್ವಿನಿ ಅವನನ್ನು ತಳ್ಳಿದ್ದ. ಅದು ಕೊಳೆಹಪ್ಪರೆ ಎಂಬ ಹಾವಿನ ಮರಿ. (**Hump nosed pir viper juvenile**). ಇವು ನಿಶಾಚರಿ (**nocturnal**) ಹಾವುಗಳು. ದಿನವಿಡಿ ಒಂದಿಷ್ಟೂ ಅಲುಗದೆ ಮಲಗಿರುತ್ತವೆ. ಸಾಮಾನ್ಯವಾಗಿ ನೆಲದಿಂದ ತುಸು ಎತ್ತರದ ಎಲೆಯ ಮೇಲೆ ಇರುತ್ತವೆ. ಮರಿಯಾದ್ದಕ್ಕೋ ಏನೋ ಅದು ನೆಲದ ಮೇಲೆ ಇತ್ತು. ಒಣಗಿದ ದರಕಿನದೇ ಬಣ್ಣವಿರುವ ಇದು ಒಮ್ಮೆ ಕಣ್ಣಿಂದ ಮರೆಯಾದರೆ ಮತ್ತೆ ಹುಡುಕುವುದು ಕಷ್ಟ. ತಿರುಗಿ ಬರುವಾಗ ಇಲ್ಲಿಯೇ ಇದ್ದರೆ ಇಬ್ಬರಿಗೂ ಅಪಾಯ ಎಂದು ನಾನು ಅಶ್ವಿನಿ ಅದನ್ನು ಒಂದು ಕೋಲಿನ ಸಹಾಯದಿಂದ ಬದಿಗೆ ಸರಿಸುವ ಯತ್ನ ಮಾಡಿದೆವು. ಮೊದಲೇ ಹೆದರಿದ್ದ ಮರಿ ಕೋಲನ್ನು ಕಂಡೊಡನೆ ಎಗರೆಗರಿ ಕಚ್ಚಲು ಯತ್ನಿಸಿತು. ಅಂತೂ ಅದನ್ನು ಬದಿಗೆ ಕಳಿಸುವಾಗ ನಮಗೆ ಸಾಕುಸಾಕಾಯಿತು.

ಮಧ್ಯ ಸಿಕ್ಕ ಪುಟ್ಟ ಝರಿಯೊಂದರಲ್ಲಿ ಕೈಕಾಲು ಮುಖ ತೊಳೆದು ಮತ್ತೆ ಸಿಕ್ಕ ಚಿಕ್ಕ ಗುಡ್ಡವನ್ನೇರಿ ಮುಂದೆ ಹೊರಟೆವು. ಮಳೆಗಾಲ ಮುಗಿದಿದ್ದರೂ ಆಗಾಗ ಬರುತ್ತಿದ್ದ ಅಕಾಲಿಕ ಮಳೆಯಿಂದ ನೆಲ ಹಸಿಯಾಗಿ ಭಯಂಕರ ಜಾರುತ್ತಿತ್ತು. ಅಶ್ವಿನಿ ಸಣ್ಣದೊಂದು ಪಲ್ಟಿಯನ್ನೂ ಹೊಡೆದು ಎದ್ದ. ಪುಣ್ಯಕ್ಕೆ ಏಟಾಗಲಿಲ್ಲ. ನನ್ನ ಚಪ್ಪಲಿ ಜಾರಿ ನಾನೂ ಅನೇಕ ಸಲ ಬೀಳುವಂತಾದರೂ ಬೀಳಲಿಲ್ಲ. ಶ್ರೀವತ್ಸ, ಸಹನಾ, ದಿನೇಶ್ ಮುಂದೆ ಹೋದರು. ಮುಂದೆ ಅರ್ಧವೋ ಒಂದೋ ಕಿಲೋಮೀಟರ್ ಹೋದಂತೆ ನಾವು ಕಾಣಲು ಬಂದ ಅರಿಶಿನ ಗುಂಡಿ ಜಲಪಾತ, ಬದಿಯಿಂದ ಮುಖ ತೋರಿತು.

ಆಹಾ! ನಮ್ಮ ಆಯಾಸವೆಲ್ಲ ಒಂದೇ ಸಲ ಕಮ್ಮಿಯಾದಂತಾಗಿ ಎಲ್ಲರೂ ಬಡಬಡನೆ ಬಂಡೆಯೇರಿ ಜಲಪಾತವನ್ನು ಕಣ್ತುಂಬಿಕೊಂಡೆವು. ಸುಮಾರು 250 ಅಡಿ ಎತ್ತರದ ಜಲಪಾತ. ಈ ವರ್ಷ ಒಳ್ಳೆ ಮಳೆಯಾದ್ದರಿಂದ ಭರ್ಜರಿ ನೀರು ಬೇರೆ ಇದೆ. ಜಲಪಾತದ ಎದುರು ಸುಮಾರು ನೂರು ಅಡಿ ವ್ಯಾಸದ ನೀರಿನ ಹೊಂಡ. ಅದರ ಎದುರು ನಾವು. ಆ ಹೊಂಡದಲ್ಲಿ ಬಿದ್ದ ನೀರು ರಭಸದಿಂದ ಮತ್ತೆ ಚಿಮ್ಮಿ ಎದುರಿನ ಕಲ್ಲು ಬಂಡೆಗಳನ್ನು ಕೊರೆದು ತನ್ನದೇ ಶೈಲಿಯ ಕಲಾಕೃತಿಯನ್ನು ರಚಿಸಿದ ಹಾಗೆ ತೋರುತ್ತಿತ್ತು. ಅಷ್ಟಕ್ಕೂ ಆ ಜಲಪಾತವೇ ಕರ್ತಾರನ ಅಪೂರ್ವ ಕಲಾಕೃತಿಯಂತೇ ಇತ್ತು. ಇಲ್ಲಿಂದ ಹರಿದ ನೀರು ಕೆಳಕ್ಕೆ ಸೌಪರ್ಣಿಕಾ ನದಿ ಸೇರುತ್ತಿತ್ತು.

ಫೋಟೊ ತೆಗೆಯಲು ಒಳ್ಳೆಯ ಆಂಗಲ್ ಸಿಗಬಹುದೆಂದು ನಾನು, ಅಶ್ವಿನಿ, ದಿನೇಶ್ ಆಚೆ ದಡ ಹೋಗಲು ಯೋಚಿಸಿ ನೀರಿನ ಹರಿವು ನೋಡಿ ಹೆದರಿ ಸುಮ್ಮನಾದೆವು. ಅಲ್ಲಿಯೇ ಬಂಡೆಯ ಕೆಳಗಿನ ನೀರಿನಲ್ಲಿ ಕೈ ಕಾಲು ಮುಖ ತೊಳೆದೆವು. ನೀರು ಶುಭ್ರವಾಗಿ, ತಣ್ಣಗಿತ್ತು.

ಅಲ್ಲಿಯೇ ಒಂದು ತಾಸು ಕಳೆದು ಕೆಳಗಿನ ಸ್ಟೆಪ್‌ಗೆ ಹೋದೆವು. ಅಲ್ಲಿ ಜಲಪಾತ ಚೆಂದವಾಗಿ ಕಾಣುತ್ತಿತ್ತು. ಸಮಯ ಹನ್ನೆರಡೂವರೆಯಾದ್ದರಿಂದ ನಿಟ್ಟೂರಿಂದ ಕಟ್ಟಿಸಿಕೊಂಡು ಬಂದ ಇಡ್ಲಿ ಪೊಟ್ಟಣವನ್ನು ಬಿಚ್ಚಿ ತಿಂದೆವು. ಒಳ್ಳೆಯ ಟ್ರೆಕ್ಕಿಂಗ್ ಆಗಿ ಸುಸ್ತಾಗಿದ್ದರಿಂದಲೋ, ಎದುರು ರುದ್ರ ಗಂಭೀರ ಜಲಪಾತ ಬೆಳ್ಳಗೆ ಹೊಳೆಯುತ್ತಾ ಅಸಾಧಾರಣ ಸೌಂದರ್ಯ ತೋರಿಸುತ್ತಿದ್ದರಿಂದಲೋ, ನಾಗರಿಕತೆಯಿಂದ ದೂರಾಗಿ ಕಾಡಿನ ಹಸಿರು, ಮೌನ ಬಿಟ್ಟರೆ ಬೇರೇನೂ ಇಲ್ಲದಿದ್ದರಿಂದಲೋ, ಎಲ್ಲರಿಗೂ ಇಡ್ಲಿ, ಬೆಳಿಗ್ಗೆ ಹೋಟೆಲಿನಲ್ಲಿ ತಿಂದದ್ದಕ್ಕಿಂತ ರುಚಿಯಾಯಿತು.

ಅಲ್ಲೇ ಇನ್ನೊಂದಿಷ್ಟು ಫೋಟೊಗಳನ್ನು ತೆಗೆದು ಖುಷಿಯಿಂದ ವಾಪಾಸು ಹೊರಟೆವು. ತುಸು ಮುಂದೆ ಬಂದು ಜಲಪಾತವನ್ನು ಮತ್ತೊಮ್ಮೆ ತಿರುಗಿ ನೋಡಿ ಗುಡ್ಡವನ್ನು ಹತ್ತಲು ಶುರುಮಾಡಿದೆವು.

ಬರುವಾಗ ಇಳುಕಲಾದ್ದರಿಂದ ಅಷ್ಟೊಂದು ಸುಸ್ತಾಗಿರಲಿಲ್ಲ. ಈಗ ಒಂದೇ ಸಮನೆ ಏರಬೇಕಾದ್ದರಿಂದ ಆಗಾಗ ನಿಂತು ದಣಿವಾರಿಸಿಕೊಳ್ಳಬೇಕಿತ್ತು. ಶ್ರೀವತ್ಸನಂತೂ ತೇಕುತ್ತಲೇ ಪ್ರತಿ ನಾಲ್ಕು ಹೆಜ್ಜೆಗೂ ನಿಂತು ಸುಧಾರಿಸಿಕೊಳ್ಳುತ್ತಿದ್ದ. ಮಧ್ಯಾಹ್ನದ ಬಿಸಿಲು ಜೋರಿದ್ದರಿಂದ ಯಾವ ಹಕ್ಕಿಗಳೂ ಕಾಣಿಸಲಿಲ್ಲ. ಸುಮಾರು ಎರಡೂವರೆಯಷ್ಟೊತ್ತಿಗೆ ಮುಖ್ಯ ದಾರಿಗೆ ಬಂದು 'ಅರಿಶಿನಗುಂಡಿ' ಬೋರ್ಡಿನ ಬಳಿ ಬಂದೆವು.

ತುಂಬಾ ಕಷ್ಟದಲ್ಲದಿದ್ದರೂ ಒಂದೇ ಸಮ ಹತ್ತುವ ಕಾರಣವಾದ್ದರಿಂದ ಎಲ್ಲರಿಗೂ ತುಸು ತ್ರಾಸವಾಗಿತ್ತು. ದಣಿವನ್ನು ಆರಿಸಿಕೊಳ್ಳಲು ಯಾವ್ಯಾವುದೋ ಕಂತೆಪುರಾಣಗಳನ್ನು ಕೊಚ್ಚುತ್ತಾ ಸಾವಕಾಶವಾಗಿ ಇಳಿಯತೊಡಗಿದೆವು. ಪಶ್ಚಿಮದ ಬಿಸಿಲು ಮುಖಕ್ಕೇ ಹೊಡೆಯುತ್ತಾ ನಮ್ಮನ್ನು ಸುಸ್ತು ಮಾಡಲು ಯತ್ನಿಸುತ್ತಿತ್ತು. ದಾರಿಯಲ್ಲಿ ಅಲ್ಲಲ್ಲಿ ನಿಂತು ಫೋಟೊ ಹೊಡೆಯುತ್ತ, ಹಕ್ಕಿಗಳು ಕಾಣಿಸಬಹುದಾ ಎಂದು ಹುಡುಕುತ್ತಾ ವಾಪಾಸು ಕಾರಿನ ಬಳಿ ಬಂದಾಗ ನಾಲ್ಕೂವರೆಯಾಗಿತ್ತು. ಬಹಳ ದಿನಗಳ ನಂತರ ಕಾಡು ಸುತ್ತಿದ ಖುಷಿಯಲ್ಲಿ ಕಾರನ್ನೇರಿದೆವು. ಕಾರು ಮುಂದಕ್ಕೋಡಿದ ಹಾಗೆಲ್ಲ ಮನಸ್ಸು ಮರಳಿ ಅರಿಶಿನಗುಂಡಿಯಲ್ಲಿಯೇ ಸುತ್ತಿ ಸುಳಿದು ಮೆಲುಕು ಹಾಕುತ್ತಿತ್ತು.

ಅರಿಶಿನಗುಂಡಿ ಜಲಪಾತ ಉಡುಪಿ ಜಿಲ್ಲೆ ಕೊಲ್ಲೂರಿನ ಬಳಿಯಿದೆ. ಹಿಂದಿನ ದಿನ ರಾತ್ರಿ ಬಂದು ಕೊಲ್ಲೂರಿನಲ್ಲಿ ಉಳಿದು ಮಾರನೇ ದಿನ ಬೆಳಿಗ್ಗೆ ಅರಣ್ಯ ಇಲಾಖೆಯಲ್ಲಿ ಪರವಾನಗಿ ಪಡೆದು ಆದಷ್ಟು ಬೇಗ ಟ್ರೆಕ್ಕಿಂಗ್ ಶುರು ಮಾಡುವುದು ಒಳಿತು. ಇಲ್ಲಿಂದ 25 ಕಿ.ಮೀ. ದೂರದಲ್ಲಿ ಕೊಡಚಾದ್ರಿ ಶಿಖರವಿದೆ. ಒಂದು ದಿನ ಜಾಸ್ತಿ ಸಮಯವಿದ್ದಲ್ಲಿ ಅದನ್ನೂ ನೋಡಬಹುದು.